# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No. 1163/2024

| | | |
|---|---|---|
| **ಹೆಸರುಃ** | **ದಯಾನಂದ** | **DW-1** |
| **ತಂದೆ/ಗಂಡ ಹೆಸರುಃ** | **ಅಪ್ಪಸ್ವಾಮಿ ಗೌಡ** | |
| **ವಯಸ್ಸುಃ** | **56 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಸುಳ್ಳಕ್ಕಿ ಗ್ರಾಮ** | **ದಿನಾಂಕಃ10.06.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ವೈ ಕೆ ವಕೀಲರಿಂದ**

ನನಗೆ ದೂರುದಾರರು ಪರಿಚಯವಿರುತ್ತಾರೆ. ಅವರ ತಂದೆ ಲೇವಾದೇವಿ ವ್ಯವಹಾರ ಮಾಡುತ್ತಿದ್ದರು. ದೂರುದಾರರ ತಂದೆ ವೆಂಕಟರಾಮಣ್ಣಶೆಟ್ಟಿಯವರ ಬಳಿ 2002 ರಲ್ಲಿ 25 ಸಾವಿರ ಹಣ ಸಾಲ ಪಡೆದಿರುತ್ತೇನೆ. 2003 ರಲ್ಲಿ ಬಡ್ಡಿ ಸಮೇತ ನಾನು ಹಣ ವಾಪಸ್ಸು ನೀಡಿರುತ್ತೇನೆ. ಅವರು ಸಾಲ ನೀಡುವಾಗ ನನ್ನಿಂದ ಒಂದು ಖಾಲಿ ಚೆಕ್ ಪಡೆದಿರುತ್ತಾರೆ. ನಾನು ಅವರ ಬಳಿ 2017 ರ ವರೆಗೂ ಸುಮಾರು 10 ಬಾರಿ ಸಾಲ ಪಡೆದಿರುತ್ತೇನೆ ಮತ್ತು ಅದನ್ನು ವಾಪಸ್ಸು ನೀಡಿರುತ್ತೇನೆ. ಆ ಸಮಯದಲ್ಲಿ ನಾನು ವರ್ಷಕ್ಕೆ ಒಂದರಂತೆ 3-4 ಚೆಕ್ ಗಳನ್ನು ನೀಡಿರುತ್ತೇನೆ. 2017 ರಲ್ಲಿ 50 ಸಾವಿರ ಸಾಲ ಪಡೆದಿರುತ್ತೇನೆ. ಆ ಸಮಯದಲ್ಲಿ ನನ್ನ ಕರ್ನಾಟಕ ಬ್ಯಾಂಕ್ ಚೆಕ್ ನ್ನು ಪಡೆದಿರುತ್ತಾರೆ. ಅದನ್ನು 2018 ರಲ್ಲಿ ಮರುಪಾವತಿ ಮಾಡಿರುತ್ತೇನೆ. 5 ಸಾವಿರ ಹಣ ಮಾತ್ರ ಬಾಕಿ ಇರುತ್ತದೆ. ಆದ್ದರಿಂದ ಚೆಕ್ ನ್ನು ಅವರ ಬಳಿ ಉಳಿಸಿಕೊಂಡಿದ್ದರು. ವೆಂಕಟರಾಮಣನವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಚೆಕ್

ನ್ನು ವಾಪಸ್ಸು ಕೇಳಿರುತ್ತೇನೆ. ಆದರೆ ಅವರು ವಾಪಸ್ಸು ನೀಡಿರುವುದಿಲ್ಲ. ಆನಂತರ ಕೇಳಿದಾಗ ಹೆಚ್ಚುವರಿ 5 ಸಾವಿರ ಹಣ ನೀಡಬೇಕು ಇಲ್ಲವಾದರೆ ಚೆಕ್ ವಾಪಸ್ಸು ನೀಡುವುದಿಲ್ಲ ಎಂದು ತಿಳಿಸಿರುತ್ತಾರೆ.

ಆನಂತರ ದೂರುದಾರರು 2021 ರಲ್ಲಿ ನನಗೆ ಕರೆ ಮಾಡಿ ತನ್ನ ತಂದೆಯ ಹಣ ನೀಡಿ ಎಂದು ತಿಳಿಸಿದರು. ನಾನು ಕೇಳಿದಾಗ ನನ್ನ ತಂದೆಯನ್ನು ಭೇಟಿಯಾಗುವಂತೆ ತಿಳಿಸಿರುತ್ತಾರೆ. ಅವರ ತಂದೆಯನ್ನು ಭೇಟಿ ಮಾಡಿದಾಗ ಅವರು ಬೆದರಿಕೆ ಹಾಕಿರುತ್ತಾರೆ. ಬಡ್ಡಿಗೆ ಬಡ್ಡಿ ಹಾಕುತ್ತೇನೆಂದು ಹೆದರಿಸಿರುತ್ತಾರೆ. 2024 ರಲ್ಲಿ ನನಗೆ ದೂರುದಾರರಿಂದ ಒಂದು ನೋಟೀಸ ಬಂದಿರುತ್ತದೆ. ಸದರಿ ನೋಟೀಸ ನ ಬಗ್ಗೆ ಅವರ ತಂದೆಯನ್ನು ಕೇಳುತ್ತೇನೆ. ಅವರು ಮಗನ ಬಳಿ ವಿಚಾರಿಸುತ್ತೇನೆಂದು ತಿಳಿಸಿದರು. ನಾನು ದೂರುದಾರರಿಂದ ಯಾವುದೇ ಹಣ ಪಡೆದಿಲ್ಲ ಮತ್ತು ಯಾವುದೇ ಚೆಕ್ ನೀಡಿಲ್ಲ. ನಿ ಪಿ 1 ಚೆಕ್ ನ್ನು ದೂರುದಾರರ ತಂದೆಗೆ ನೀಡಿರುತ್ತೇನೆ. ದೂರುದಾರರ ತಂದೆ ಹೊರತು ಪಡಿಸಿ ಬೇರೆ ಯಾರೊಂದಿಗೂ ನನಗೆ ಹಣಕಾಸಿನ ವ್ಯವಹಾರ ಇರಲಿಲ್ಲ. ಆದ್ದರಿಂದ ಈ ಪ್ರಕರಣವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**